# ಶವದ ಸುತ್ತ ಸಮಾಲೋಚನೆ

ಯಾವುದೋ ಒಂದು ಹೊತ್ತಿಗೆ ಕನಸುಗಳ ಕೀಟಲೆಯಿಂದ ಅರೆ ಪ್ರಜ್ಞಾವಸ್ಥೆಯಲ್ಲಿರುವ ನನ್ನ ಸ್ಮೃತಿಪಟಲ ಅರೆ ಎಚ್ಚರ ಅರೆ ನಿದ್ದೆಯಲ್ಲಿ ತೊಳಲಾಡಲು ಪ್ರಾರಂಭಿಸಿತು. ಅದು ಹಗಲೋ ರಾತ್ರಿಯೋ, ಕತ್ತಲೋ ಬೆಳಕೋ, ಆಕಾಶವೋ ಭೂಮಿಯೋ, ಮನೆಯೋ ಅತಿಥಿ ಗೃಹವೋಬಯಲೊ ಟೆಂಟೋ, ಎಲ್ಲಿದ್ದೀನೋ ಒಂದೂ ಗೊತ್ತಾಗಲಿಲ್ಲ. ಯಾವ ಲೋಕದ ಧ್ವನಿಗಳೋ, ಮನುಷ್ಯರೋ ಪ್ರಾಣಿಗಳೋ, ಎಲ್ಲೋ ನೇತಾಡುತ್ತಿದ್ದೇನೆ. ಇಂತಹ ಸಮಯದಲ್ಲಿ ನನ್ನ ಕಣ್ಣುಗಳ ಮುಂದೆ ವಿಚಿತ್ರ ಲೋಕಗಳು ತೆರೆದುಕೊಂಡವು. ನನ್ನ ಬೆನ್ನಿನ ಹಿಂದೆ ನಿಧಾನವಾಗಿ ದೃಢವಾದ ಎರಡು ರೆಕ್ಕೆಗಳು ಮೂಡಿದವು. ತಲೆಯಲ್ಲಿ ಹಕ್ಕಿಗಳಿಗೆ ಅಥವಾ ವಿಮಾನಗಳಿಗೆ ಇರುವಂತಹ ಒಂದು ಜುಟ್ಟು, ಹಿಂದೆ ಒಂದು ಬಾಲ ಸರಾಗವಾಗಿ ಹೊರಹೊಮ್ಮಿ ಕೆಲವೇ ಕ್ಷಣಗಳಲ್ಲಿ ಗಾಳಿಯನ್ನು ಸೀಳಿಕೊಂಡು ಹಾರಿಹೋಗಲು ಸಜ್ಜಾಗಿಬಿಟ್ಟವು. ಇನ್ನೇನು ಬೆಟ್ಟಗುಡ್ಡ, ಕಾಡುಕಣಿವೆ ಎಲ್ಲದರ ಮೇಲೆ ತೇಲಾಡುತ್ತ ಹಕ್ಕಿಯಂತೆ ಹಾರುತ್ತ ಹೋಗುತ್ತಿದ್ದೇನೆ. ಮಧ್ಯೆ ಮಧ್ಯೆ ಮಿದುಳಿನ

